RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**


| | | |
|---|---|---|
| ಭಾಗ- IV-A | ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೧೭, ೨೦೧೪ (ಭಾದ್ರಪದ ೨೬, ಶಕ ವರ್ಷ ೧೯೩೬) | ನಂ. ೫೮೨ |
| Part- IV-A | Bangalore, Wednesday, September 17, 2014 (Bhadrapada 26, Shaka Varsha 1936) | No. 582 |


**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ**

**ಅಧಿಸೂಚನೆ**

**ಸಂ. ಗ್ರಾಅಪ 313 ಗ್ರಾಪಂಕಾ 2013, ಬೆಂಗಳೂರು, ದಿನಾಂಕ 17.09.2014**

ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಕಲಂ 3ರ ಅಡಿಯ ಉಪಕಲಂ (2) ಖಂಡ (ಎ) ರಲ್ಲಿ ಅಗತ್ಯಪಡಿಸಲಾಗಿರುವಂತೆ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) ವೃಂದ ಮತ್ತು ನೇಮಕಾತಿ ನಿಯಮಗಳು, 2008ಕ್ಕೆ ತಿದ್ದುಪಡಿ ಮಾಡಲು ಕರಡು ನಿಯಮಗಳನ್ನು ಅಧಿಸೂಚನೆ ಸಂಖ್ಯೆ ಗ್ರಾಅಪ 313 ಗ್ರಾಪಂಕಾ 2013, ದಿನಾಂಕ 21.07.2014ರ ಮೂಲಕ ದಿನಾಂಕ 21.07.2014ರ ವಿಶೇಷ ಕರ್ನಾಟಕ ರಾಜ್ಯ ಪತ್ರದ ಭಾಗ–iv-A ರ ಸಂಖ್ಯೆ 489 ರಲ್ಲಿ ಪ್ರಕಟಿಸಿ ಸದರಿ ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಲ್ಲಿಸಲು ಆಹ್ವಾನಿಸಲಾಗಿದ್ದರಿಂದ,

ಸದರಿ ಕರಡನ್ನು ದಿನಾಂಕ 21.07.2014 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿದ್ದರಿಂದ.

ಮತ್ತು ಈ ಸಂಬಂಧ ಸ್ವೀಕರಿಸಲಾದ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿರುವುದರಿಂದ,

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ, ಅಧಿನಿಯಮ ಸಂಖ್ಯೆ 14)ರ ಕಲಂ 3ರ ಅಡಿಯ ಉಪ ಕಲಂ (1) ಸಹವಾಚನ ಕಲಂ 8ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಏನೆಂದರೆ:-

**ನಿಯಮಗಳು**

1. **ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಅನುಸೂಚಿಗೆ ತಿದ್ದುಪಡಿ.-** ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು, 2008ರ ಅನುಸೂಚಿಯಲ್ಲಿ ಕ್ರಮ ಸಂಖ್ಯೆ 9 ರಲ್ಲಿ

   ಎ. ಕ್ರಮ ಸಂಖ್ಯೆ 4 ರಲ್ಲಿ **"ಶೇಕಡ ಐವತ್ತರಷ್ಟು ಹುದ್ದೆಗಳನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ (ಗ್ರೇಡ್–II)** ವೃಂದದಿಂದ **"ಬಡ್ತಿ ಮೂಲಕ"** ಎಂಬ ಪದಗಳಿಗೆ ನಂತರ ಮುಂಬಡ್ತಿಗಾಗಿ ಗ್ರಾಮ ಪಂಚಾಯತಿ ಕಾರ್ಯದರ್ಶಿ (ಗ್ರೇಡ್–II) ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದ ಬಲಕ್ಕನುಸಾರವಾಗಿ 3:2 ಅನುಪಾತದಲ್ಲಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ (ಗ್ರೇಡ್–I) ವೃಂದದ ಮೊದಲನೇ ಮೂರು ಖಾಲಿ ಹುದ್ದೆಗಳನ್ನು ಗ್ರಾಮ

ಪಂಚಾಯತಿ ಕಾರ್ಯದರ್ಶಿ (ಗ್ರೇಡ್– II) ರವರಿಗೆ ಹಾಗೂ ತದನಂತರದ 4 ಮತ್ತು 5ನೇ ಖಾಲಿ ಹುದ್ದೆಗಳಿಗೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕರಿಂದ ಭರ್ತಿ ಮಾಡತಕ್ಕದ್ದು".

ಬಿ. ಕಾಲಂ 5 ರಲ್ಲಿನ "ಬಡ್ತಿಗಾಗಿ" ಶೀರ್ಷಿಕೆಯಡಿ "ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್– II) ಪದಗಳ ನಂತರ ಅಥವಾ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು. ಸಂದರ್ಭಾನುಸಾರ ಎಂಬ ಪದಗಳನ್ನು ಸೇರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎನ್. ಕಲಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಗ್ರಾ.ಅ&ಪಂ.ರಾಜ್ ಇಲಾಖೆ

**RURAL DEVELOPMENT AND PANCHAYAT RAJ SECRETARIAT**

**NOTIFICATION**

**No. RDP 313 GPK 2013, Bangalore, dated: 17th September 2014**

Whereas the draft of the following rules was issued as required by clause (a) of sub-section (2) of Section 3 read with Section 9 of the Karnataka State Civil Services Act, 1978 (Karnataka Act 14 of 1990) in Notification No. RDP 313 GPK 2013, dated 21.07.2014 and thereafter published in Part-IV A of the Karnataka Gazette Extraordinary dated 21.07.2014 inviting objections and suggestions from persons likely to be affected thereby within fifteen days from the date of publication of the draft in the Official Gazette.

Whereas the said draft was made available to the public on 21.07.2014.

And whereas the objections and suggestions received in this behalf have been considered by the State Government.

Now, therefore, in exercise of the powers conferred by sub-section (1) of Section 3 read with Section 8 of the Karnataka Civil Services Act, 1978 (Karnataka Act 14 of 1990), the Government of Karnataka hereby makes the following rules, namely:-

**RULES**

**1. Title and commencement:-** (1) These rules may be called the Karnataka General Service (Development Branch and Local Government Branch) (Cadre and Recruitment) (Amendment) Rules, 2014.

(2) They shall come into force from the date of their publication in the Official Gazette.

**2. Amendment of the Schedule.-** In the Karnataka General Service (Development Branch and Local Government Branch) (Cadre and Recruitment) Rules, 2008, in the Schedule, in the entries relating to the category of post of "Grama Panchayat Secretary and Rural Development Assistant (Grade-I)" at serial number 9,-

(a) in the entries in column 4, for the words ``Fifty per cent by promotion from the cadre of Grama Panchayat Secretary and Rural Development Assistant (Grade II)``, the words " By promotion from the cadre of Grama Panchayat Secretary (Grade-II) and Second Division Accounts Assistants in the ratio of 3:2 every fourth and fifth vacancy being filled by promotion of Second Division Accounts Assistants"

(b) In the entries in column 5, under the heading "For Promotion", after the words "Grama Panchayat Secretary and Rural Development Assistant (Grade-II)", the words or Second Division Accounts Assistants, as the case may be" shall be inserted.

By Order and in the name of the Governor of Karnataka,

**S.N. Kalavathi**
Under Secretary to Government (i/c)
RD&PR Dept.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) (100 ಪ್ರತಿಗಳು)